ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

ಸಂಖ್ಯೆ: ಪಪೂಶಿ/ಲೆಪ-03/110(P)/2012-13 ದಿನಾಂಕ: 24-07-2012.

## ಅನುದಾನ ಬಿಡುಗಡೆ ಆದೇಶ

ವಿಷಯ:- 2012-13 ನೇ ಸಾಲಿನಲ್ಲಿ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಸಿಬ್ಬಂದಿಗಳಿಗೆ ವೇತನ ವೆಚ್ಚ ಭರಿಸಲು ಯೋಜನೆ ಶೀರ್ಷಿಕೆಯಡಿ ಜಿಲ್ಲಾವಾರು ಅನುದಾನದ ಹಂಚಿಕೆ ಮಾಡುವ ಬಗ್ಗೆ.

ಉಲ್ಲೇಖ:- 1) ಸರ್ಕಾರದ ಅಧಿಕೃತ ಜ್ಞಾಸಂ. ಎಫ್.ಡಿ. 4 ಬಿಪಿಇ 2012, ಬೆಂಗಳೂರು ದಿನಾಂಕ: 31-03-2012.
2) ಸರ್ಕಾರದ ಆದೇಶ ಸಂಖ್ಯೆ: ಇಡಿ: 89: ಯೋಯೋಕ 2012, ದಿ: 13-04-2012 [ಇಡಿ:12 ಸ್ಕೀಮರ (ಯುನಿಕ್)2012, ದಿ: 13-04-2012
3) ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಇಡಿ: 89: ಯೋಯೋಕ 2012 (ಭಾಗ), ದಿ: 10-05-2012.
4) ಸರ್ಕಾರದ ಆದೇಶ ಸಂಖ್ಯೆ ಇಡಿ 89 ಯೋಯೋಕ 2012, ದಿ: 21-07-2012.

=============

2012-13ನೇ ಸಾಲಿನಲ್ಲಿ ರಾಜ್ಯದಲ್ಲಿನ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಬೋಧಕ/ಬೋಧಕೇತರ ಸಿಬ್ಬಂದಿ ವೇತನ ವೆಚ್ಚ ಭರಿಸುವ ಸಲುವಾಗಿ ಲೆಕ್ಕ ಶೀರ್ಷಿಕೆ **" 2202-02-110-3-01" (ಯೋಜನೆ)** ಅಡಿಯಲ್ಲಿ **ಉಪಶೀರ್ಷಿಕೆ: 101 ಅಡಿ ರೂ. 203.00 ಲಕ್ಷಗಳು, ಉಪಶೀರ್ಷಿಕೆ 422 ಅಡಿ ರೂ. 334.00 ಲಕ್ಷಗಳು ಹಾಗೂ ಉಪಶೀರ್ಷಿಕೆ 423 ಅಡಿ ರೂ. 250.00 ಲಕ್ಷಗಳನ್ನು** ಬಿಡುಗಡೆಗೊಳಿಸಿ ಕೆಳಕಂಡ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಗೆ ಅವರುಗಳ ಹೆಸರಿನ ಮುಂದೆ ಸೂಚಿಸಿರುವಂತೆ ಅನುದಾನವನ್ನು ಮರುಹಂಚಿಕೆ ಮಾಡಲಾಗಿದೆ.

| ಕ್ರಮ ಸಂಖ್ಯೆ | ಜಿಲ್ಲೆ | ಬಿಡುಗಡೆಯಾಗಿರುವ ಅನುದಾನದ ಮೊತ್ತ (ರೂ. ಲಕ್ಷಗಳಲ್ಲಿ) | | |
|---|---|---|---|---|
| | | ಉಪ ಶೀರ್ಷಿಕೆ 101 | ಉಪ ಶೀರ್ಷಿಕೆ 422 | ಉಪ ಶೀರ್ಷಿಕೆ 423 |
| 1 | ಬೆಂಗಳೂರು ಉತ್ತರ | 1.40 | 0.00 | 2.00 |
| 2 | ಬೆಂಗಳೂರು ದಕ್ಷಿಣ | 7.00 | 15.00 | 10.00 |
| 3 | ಬೆಂಗಳೂರು ಗ್ರಾಮಾಂತರ | 2.50 | 0.00 | 3.00 |
| 4 | ಬಳ್ಳಾರಿ | 8.60 | 0.00 | 10.00 |
| 5 | ಬೆಳಗಾಂ | 17.00 | 35.00 | 20.00 |
| 6 | ಬಾಗಲಕೋಟೆ | 7.00 | 14.00 | 7.00 |
| 7 | ಬಿಜಾಪುರ | 13.00 | 26.00 | 15.00 |

| | | | | |
|---|---|---|---|---|
| 8 | ಬೀದರ್ | 14.00 | 27.00 | 15.00 |
| 9 | ದಾವಣಗೆರೆ | 3.00 | 6.00 | 5.00 |
| 10 | ಚಿತ್ರದುರ್ಗ | 12.00 | 25.00 | 15.00 |
| 11 | ಚಿಕ್ಕಮಗಳೂರು | 3.60 | 8.00 | 5.00 |
| 12 | ಗದಗ | 7.00 | 14.00 | 10.00 |
| 13 | ಹಾವೇರಿ | 8.00 | 15.00 | 10.00 |
| 14 | ಧಾರವಾಡ | 9.00 | 20.00 | 10.00 |
| 15 | ಗುಲ್ಬರ್ಗಾ | 6.00 | 12.00 | 10.00 |
| 16 | ಹಾಸನ | 12.00 | 22.00 | 15.00 |
| 17 | ಕೋಲಾರ | 2.40 | 0.00 | 3.00 |
| 18 | ಚಾಮರಾಜನಗರ | 0.00 | 0.00 | 0.00 |
| 19 | ಮೈಸೂರು | 3.70 | 0.00 | 5.00 |
| 20 | ಮಂಡ್ಯ | 4.70 | 0.00 | 5.00 |
| 21 | ಕೊಪ್ಪಳ | 5.70 | 0.00 | 6.00 |
| 22 | ರಾಯಚೂರು | 1.60 | 0.00 | 2.00 |
| 23 | ಉತ್ತರ ಕನ್ನಡ | 7.00 | 15.00 | 10.00 |
| 24 | ಉಡುಪಿ | 5.00 | 10.00 | 5.00 |
| 25 | ದಕ್ಷಿಣ ಕನ್ನಡ | 11.00 | 23.00 | 12.00 |
| 26 | ಶಿವಮೊಗ್ಗ | 3.30 | 0.00 | 5.00 |
| 27 | ತುಮಕೂರು | 17.00 | 35.00 | 20.00 |
| 28 | ಕೊಡಗು | 3.00 | 5.00 | 5.00 |
| 29 | ಚಿಕ್ಕಬಳ್ಳಾಪುರ | 3.50 | 0.00 | 5.00 |
| 30 | ರಾಮನಗರ | 4.00 | 7.00 | 5.00 |
| 31 | ಯಾದಗಿರಿ | 0.00 | 0.00 | 0.00 |
| | ಒಟ್ಟು | **203.00** | **334.00** | **250.00** |

ಬಿಡುಗಡೆ ಮಾಡಲಾದ ಅನುದಾನದ ಒಟ್ಟು ಮೊತ್ತ ಅಕ್ಷರಗಳಲ್ಲಿ :

**ಉಪಶೀರ್ಷಿಕೆ: 101:** ರೂ. ಎರಡು ನೂರ ಮೂರು ಲಕ್ಷ ರೂಪಾಯಿಗಳು ಮಾತ್ರ

**ಉಪಶೀರ್ಷಿಕೆ: 422:** ರೂ. ಮುನ್ನೂರ ಮೂವತ್ತನಾಲ್ಕು ಲಕ್ಷ ರೂಪಾಯಿಗಳು ಮಾತ್ರ

**ಉಪಶೀರ್ಷಿಕೆ: 423:** ರೂ. ಇನ್ನೂರ ಐವತ್ತು ಲಕ್ಷ ರೂಪಾಯಿಗಳು ಮಾತ್ರ

ಸೂಚನೆಗಳು:-

1. ಅನುದಾನಕ್ಕೊಳಪಡಿಸಿದ ಸರ್ಕಾರದ ಆದೇಶಗಳಲ್ಲಿ ವಿಧಿಸಲಾಗಿರುವ ಷರತ್ತುಗಳು, ಅನುದಾನ ಸಂಹಿತೆಯ ನಿಯಮಾವಳಿಗಳು ಮತ್ತು ಕಾಲಕಾಲಕ್ಕೆ ಇಲಾಖೆಯು ಹೊರಡಿಸಿದ ನಿರ್ದೇಶನಗಳನ್ನು ಪಾಲಿಸುತ್ತಿರುವುದನ್ನು ಖಚಿತಪಡಿಸಿಕೊಂಡು ಅನುದಾನದ ಬಿಲ್ಲುಗಳನ್ನು ಮಾನ್ಯ ಮಾಡುವುದು ಸಂಬಂಧಿಸಿದ ಆಯಾ ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖಾ ಉಪನಿರ್ದೇಶಕರ ಹೊಣೆಗಾರಿಕೆಯಾಗಿರುತ್ತದೆ. ಅನುದಾನಕ್ಕೊಳಪಡಿಸಿದ ಸರ್ಕಾರದ ಆದೇಶಗಳಲ್ಲಿ ಹಾಗೂ ಅನುದಾನ ಸಂಹಿತೆಯಲ್ಲಿ ನಿಗಧಿಪಡಿಸಿರುವಂತೆ ಕಾರ್ಯಭಾರವಿಲ್ಲದೇ ಇದ್ದಲ್ಲೂ ವೇತನ ಅನುದಾನ ಬಿಲ್ಲುಗಳನ್ನು ತೇರ್ಗಡೆಗೊಳಿಸಿದಲ್ಲಿ ಸಂಬಂಧಿಸಿದ ಆಯಾ ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖಾ ಉಪನಿರ್ದೇಶಕರುಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

2. ಮಾರ್ಚ್ 2012ರಿಂದ ಫೆಬ್ರವರಿ 2013 ರವರೆಗಿನ ಅವಧಿಯಲ್ಲಿ ಈ ಆಯುಕ್ತಾಲಯದ ಆಡಳಿತ ವಿಭಾಗದಿಂದ ನೂತನ ನೇಮಕಾತಿಗಳಿಗೆ ಅನುದಾನ ಸಂಹಿತೆ ಅನುಮೋದನೆ ದೊರಕಿದ್ದಲ್ಲಿ ಅಂತಹ ಆದೇಶಗಳ ದೃಢೀಕೃತ ಪ್ರತಿಯನ್ನು ಲೆಕ್ಕಪತ್ರಾಧಿಕಾರಿಯವರಿಗೆ ಕೂಡಲೇ ಕಳುಹಿಸಿ ಸಂಬಂಧಿಸಿದ ನೌಕರರಿಗೆ ಅನುದಾನಕ್ಕೊಳಪಟ್ಟ ದಿನಾಂಕದಿಂದ ಫೆಬ್ರವರಿ 2013 ವರೆಗಿನ ಅವಧಿಗೆ ತಗಲುವ ವೆಚ್ಚಕ್ಕೆ ಲೆಕ್ಕಪತ್ರ ಶಾಖೆಯಿಂದ ಅನುಮತಿ ಪಡೆದ ನಂತರ ವೇತನವೆಚ್ಚ ಭರಿಸತಕ್ಕದ್ದು.

3. ಹೊಸದಾಗಿ ಅನುದಾನಕ್ಕೊಳಪಟ್ಟಿರುವ ಸಿಬ್ಬಂದಿಯ ಮೊದಲ ಹಂತದ ವೇತನ ನಿಗಧಿ ಮತ್ತು ವೆಚ್ಚ ಭರಿಸಲು ಲೆಕ್ಕಪತ್ರಾಧಿಕಾರಿಯವರಿಂದ ಆದೇಶ ಪಡೆದ ನಂತರವೇ ಬಿಲ್ಲುಗಳನ್ನು ಮಾನ್ಯ ಮಾಡತಕ್ಕದ್ದು. ಕೇವಲ ಆಡಳಿತಾತ್ಮಕ ಆದೇಶದನ್ವಯ ಜಿಲ್ಲಾ ಮಟ್ಟದಲ್ಲಿ ವೆಚ್ಚ ಭರಿಸತಕ್ಕದ್ದಲ್ಲ. ಆಯವ್ಯಯದಲ್ಲಿ ವ್ಯತ್ಯಯಗಳನ್ನು ಸರಿದೂಗಲು ಈ ಕ್ರಮ ಅನಿವಾರ್ಯವಾಗಿದೆ.

4. ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನದಲ್ಲಿ ಪ್ರತಿ ತಿಂಗಳ ವೇತನವನ್ನು ಮಾತ್ರ ಭರಿಸತಕ್ಕದ್ದು. ಯಾವುದೇ ಸಿಬ್ಬಂದಿಯ ಗಳಿಕೆ ರಜೆ ನಗದೀಕರಣ ಬಿಲ್ಲುಗಳು ಹಾಗೂ ಯಾವುದೇ ತರಹದ ಬಾಕಿ ಬಿಲ್ಲಿಗೆ ವೆಚ್ಚ ಭರಿಸಲು ಲೆಕ್ಕಪತ್ರಾಧಿಕಾರಿಯವರಿಂದ ಪೂರ್ವಾನುಮತಿ ಪಡೆಯತಕ್ಕದ್ದು.

5. ಸದರಿ ಲೆಕ್ಕಶೀರ್ಷಿಕೆಗೆ ಸಂಬಂಧಪಟ್ಟಂತೆ ಪ್ರತಿ ತಿಂಗಳ ವೆಚ್ಚದ ಮಾಹಿತಿಯನ್ನು ನಿಗಧಿತವಾಗಿ ಲೆಕ್ಕಪತ್ರಾಧಿಕಾರಿಗಳು, ಪಪೂಶಿಇ, ಬೆಂಗಳೂರು ಇವರಿಗೆ ಕಡ್ಡಾಯವಾಗಿ ಕಳುಹಿಸತಕ್ಕದ್ದು.

ಆಯುಕ್ತರು,
ಪದವಿಪೂರ್ವ ಶಿಕ್ಷಣ ಇಲಾಖೆ.

24.7

ಪ್ರತಿಗಳು:-

1. ಉಪನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ .
2. ಸಂಬಂಧಿಸಿದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಕಛೇರಿ ಪ್ರತಿ.